


# ಬಿಯರ್ ಜಂಬೂಸವಾರಿ!

## ಜರ್ಮನಿಯ ಬಿಯರ್ ಜಾತ್ರೆಯಲ್ಲಿ ಲಕ್ಷ ಲಕ್ಷ ಪಾನೀಯಪ್ರಿಯರು

**ಲೋಕದ ಕಣ್ಣಿಗೆ ಜರ್ಮನ್ನರ 'ಬಿಯರ್ ಹಬ್ಬ' ಕುಡಿತದ ವಿಜೃಂಭಣೆಯ ಆಚರಣೆಯಂತೆ ಕಾಣಿಸುತ್ತದೆ. ಆದರೆ, ಜರ್ಮನ್ನರು ಈ ಹಬ್ಬವನ್ನು ಸಾಂಸ್ಕೃತಿಕ ಜಂಬೂಸವಾರಿಯಂತೆ ಕಾಣುತ್ತಾರೆ; ಬದುಕಿನ ಬೆರಗು ಮತ್ತು ಬೆಡಗನ್ನು ಸೆಲೆಬ್ರೇಟ್ ಮಾಡುತ್ತಾರೆ.**

**■ ಎಸ್. ನಟರಾಜ ಬೂದಾಳು**

ಜರ್ಮನಿ ದೇಶದ ಮ್ಯೂನಿಚ್‌ನಲ್ಲಿ ಪ್ರತಿವರ್ಷವೂ ನಡೆಯುವ 'ಅಕ್ಟೋಬರ್ ಫೆಸ್ಟಿವಲ್' ವಿಶಿಷ್ಟವಾದ ಸಂಭ್ರಮದ 'ನಾಡಹಬ್ಬ'. ಎರಡು ವಾರಗಳ ಕಾಲ ನಡೆಯುವ ಈ ಸಂಭ್ರಮದ ಹಬ್ಬಕ್ಕೆ ಯೂರೋಪಿನ ಎಲ್ಲ ದೇಶಗಳಿಂದ ಸುಮಾರು ಐದು ಲಕ್ಷ ಜನ ಜಮಾಯಿಸುತ್ತಾರೆ. ಕೊರೊನಾ ಕಾರಣಕ್ಕೆ ಮೂರು ವರ್ಷಗಳಿಂದ ಹಬ್ಬ ನಡೆದಿರಲಿಲ್ಲ.

ಈ ಸಲದ ಹಬ್ಬಕ್ಕೆ ಮ್ಯೂನಿಚ್ ನಗರ ಮದುವಣಗಿತ್ತಿಯಂತೆ ಕಾಣುತ್ತಿತ್ತು. ಮೊದಲ ದಿನ ನಮ್ಮ ದಸರೆಯನ್ನು ನೆನಪಿಸುವ ಬೃಹತ್ ಮೆರವಣಿಗೆ ನಡೆಯುತ್ತದೆ. 9000 ಕಲಾವಿದರು, ತರುಣ–ತರುಣಿಯರು ಪಾಲ್ಗೊಳ್ಳುವ ಮೆರವಣಿಗೆ ಸುಮಾರು 5 ಕಿಲೋಮೀಟರಿನಷ್ಟು ಉದ್ದವಿರುತ್ತದೆ. 7 ಕಿಲೋಮೀಟರು ದೂರ ಸಾಗುವ ಮೆರವಣಿಗೆ ನೋಡಲು ರಸ್ತೆಯಲ್ಲಿ ಜನ ಕಿಕ್ಕಿರಿದಿರುತ್ತಾರೆ. ಕೊರೆವ ಚಳಿ ಮತ್ತು ತುಂತುರು ಮಳೆ ನಡುವೆ ರಥಬೀದಿಯ ಒಂದು ಬದಿ ನಾವು ಜಾಗ ಮಾಡಿಕೊಂಡು ನಿಂತೆವು. ಈ ದಸರೆಯ ನಾಡದೇವತೆ ಬಿಯರ್ ಆಗಿರುವುದರಿಂದ ಇದಕ್ಕೆ 'ಬಿಯರ್ ಹಬ್ಬ'ವೆಂಬ ಅನ್ವರ್ಥಕ ಹೆಸರೂ ಇದೆ.

### ಭರ್ಜರಿ ಬಿಯರ್ ಸವಾರಿ

ಯೂರೋಪಿನ ಪ್ರಖ್ಯಾತ ಮದ್ಯ ತಯಾರಿಕಾ ಕಂಪನಿಗಳು, ವೈನರಿಗಳು, ವಾಣಿಜ್ಯ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು ಮತ್ತು ಸಾಂಸ್ಕೃತಿಕ ಸಂಘಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತವೆ. ಆಗಸ್ಟಿನರ್, ಪೌಲ್‌ನರ್, ಮ್ಯೂನಿಚ್ ಬ್ರುವರೀಸ್, ಎಚ್.ಬಿ ಮುಂತಾದ ಮದ್ಯ ತಯಾರಿಕಾ ಕಂಪನಿಗಳು ತಮ್ಮ ಹೆಚ್ಚುಗಾರಿಕೆಯನ್ನು ಪ್ರದರ್ಶಿಸಲು ಇದನ್ನೊಂದು ಅವಕಾಶವನ್ನಾಗಿ ಬಳಸಿಕೊಳ್ಳುತ್ತವೆ.

ಬಿಯರ್ ತುಂಬಿದ ಹತ್ತಾರು ಪೀಪಾಯಿಗಳನ್ನು ಅಂದವಾದ ಸಾರೋಟು ಗಾಡಿಗಳಲ್ಲಿ ಒಂದರ ಮೇಲೊಂದು ಪೇರಿಸಿ ಆನೆಗಳಂತಿರುವ ಐದಾರು ಕುದುರೆಗಳನ್ನು ಆ ತೇರಿಗೆ ಕಟ್ಟಿ ಮೆರವಣಿಗೆಯಲ್ಲಿ ತರುತ್ತಾರೆ. ಸುಂದರವಾದ ತರುಣ ತರುಣಿಯರ ನಡುವೆ ಆಯಾ ಕಂಪನಿಯ ಸಂಗೀತದ ಬ್ಯಾಂಡ್ ವಾದ್ಯಗಳನ್ನು ನುಡಿಸುತ್ತ ಸಾಗುತ್ತದೆ. ರಸ್ತೆ ಪಕ್ಕದ ಅಭಿಮಾನಿಗಳಿಂದ ಪ್ರತಿಕ್ರಿಯೆ ಬಂದಾಗ ಅವರೆದುರು ನಿಂತು ಅವರ ಮೆಚ್ಚಿನ ಹಾಡುಗಳನ್ನು ನುಡಿಸಿ ಅಭಿನಂದನೆ ಪಡೆಯುತ್ತಾರೆ. ಅನೇಕರು ಬಿಯರ್ ಆಸ್ವಾದಿಸುತ್ತಲೇ ಅಭಿನಂದಿಸುತ್ತಾರೆ. ಈ ತೇರುಗಳ ಜೊತೆಗೆ ಸಾಂಸ್ಕೃತಿಕ ನೆನಪುಗಳ ಸ್ಮರಣಿಕೆಗಳೂ ಮೆರವಣಿಗೆಯಲ್ಲಿ ಸಾಗುತ್ತವೆ.

ಬಿಯರ್ ಹಬ್ಬ ನಡೆಯುವ ಬವೇರಿಯಾ ರಾಜ್ಯವು ಪ್ರಖ್ಯಾತವಾದ ಬಿ.ಎಂ.ಡಬ್ಲ್ಯೂ. (ಬವೇರಿಯಾ ಮೋಟಾರ್ ವರ್ಕ್ಸ್), ಮರ್ಸಿಡಿಸ್ ಬೆಂಜ್, ಫೋಕ್ಸ್‌ವ್ಯಾಗನ್ ವಾಹನಾ ತಯಾರಿಕಾ ಕಂಪನಿಗಳ ತವರು ನೆಲವಾಗಿರುವುದರಿಂದ, ಅವುಗಳ ಪ್ರಾತಿನಿಧಿಕ ಸ್ಮರಣಿಕೆಗಳೂ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತವೆ. ಯೂರೋಪ್ ಜೀವನಶೈಲಿಯ ಮಾದರಿ ಎಂಬ ಹೆಗ್ಗಳಿಕೆಯೂ ಈ ನೆಲಕ್ಕಿದೆ. ಈ ನಾಡಹಬ್ಬದ ಮೆರವಣಿಗೆಯಲ್ಲಿ ಬೇಟೆ, ನೃತ್ಯ ಮತ್ತು ಮದಿರೆಗಳ ಪ್ರಾಚೀನ ನೆನಪುಗಳನ್ನು ಅಭಿನಯಿಸುವ ಸ್ಮರಣಿಕೆಗಳೂ ಇರುತ್ತವೆ. ಮೆರವಣಿಗೆಯಲ್ಲಿ ಪಾಲ್ಗೊಳ್ಳುವವರಿಗೆ ದಣಿವಾಗದಂತೆ ನೋಡಿಕೊಳ್ಳಲು ಬಿಯರ್ ತುಂಬಿದ ತೆರೆದ ಪೀಪಾಯಿಯೊಂದನ್ನು ಇಟ್ಟಿರುವ ಪುಟ್ಟ ಗಾಡಿಯೂ ಜೊತೆಯಲ್ಲಿ ಸಾಗುತ್ತದೆ! ಸುಂದರವಾದ ಹುಡುಗ ಹುಡುಗಿಯರು ತಮ್ಮನ್ನು ನೋಡಲು ಬಂದಿರುವ ಜನರ ಕಡೆಗೆ ಕೈಬೀಸಿ ಎಲ್ಲರ ಗಮನ ಸೆಳೆಯಲು ತಮ್ಮ ಕೈಲಾದ ಪ್ರಯತ್ನ ಮಾಡುತ್ತಾರೆ. ಮ್ಯೂನಿಚ್ ನಗರದ ನಡುವೆಯೇ ಇರುವ ಬೃಹತ್ ಬಯಲಿನಲ್ಲಿ ಈ ಮೆರವಣಿಗೆ ಮುಕ್ತಾಯಗೊಳ್ಳುತ್ತದೆ. ಇನ್ನು ಹದಿನೈದು ದಿನ ಈ ಬಯಲು ಜನರಿಂದ ತುಂಬಿ ತುಳುಕುತ್ತದೆ. ಥೇಟ್ ನಮ್ಮ ಬನಶಂಕರಿ ಜಾತ್ರೆಯ ಆವರಣದಂತೆ ಅದು ಕಾಣುತ್ತದೆ!

### ಜನ ಮರುಳೋ ಜಾತ್ರೆ ಮರುಳೋ

ಐದಾರು ಚದರ ಕಿಲೋ ಮೀಟರುಗಳ ವಿಸ್ತಾರವಾದ ಆವರಣದಲ್ಲಿ ಜಾತ್ರೆ ನೆರೆಯುತ್ತದೆ.